ಶ್ರೀ ಎನ್. ರಾಚಯ್ಯ : ಈಗ ಏನು ಒಂದೊಂದು ತಾಲ್ಲೂಕಿನಲ್ಲಿ 60-70 ರ ವರೆಗೆ ಗ್ರಾಮಪಂಚಾಯಿತಿಗಳು ಇವೆಯೋ, ಅವುಗಳ ಸಂಖ್ಯೆಯನ್ನು ಕಡಿಮೆ ಮಾಡುವಾಗ ಕಾಲ ತೆಗೆದುಕೊಳ್ಳುತ್ತದೆ ಎಂದು ಮಾತ್ರ ನಾನು ಹೇಳಿದ್ದು. ಈಗ ಇರತಕ್ಕಂತಹ ಗ್ರೂಪ್ ಪಂಚಾಯಿತಿ ಅಥವಾ ಪ್ರತ್ಯೇಕವಾದ ಪಂಚಾಯಿತಿಗಳಿಂದ ಏನೇನು ಮನವಿಗಳು ಸರ್ಕಾರಕ್ಕೆ ಬಂದಿರುತ್ತವೆ ಅವುಗಳ ಬಗ್ಗೆ ನಾನು ಈಗಾಗಲೇ ಮೇಲ್ಮನೆಯಲ್ಲಿ ಸ್ಪಷ್ಟಪಡಿಸಿದ್ದೇನೆ ನಾನು ಲಾ ಡಿಪಾರ್ಟ್‌ಮೆಂಟ್‌ನೊಡನೆ ಸಮಾಲೋಚನೆ ಮಾಡಿ ಪ್ರತಿಯೊಂದು ಸಬ್ ಡಿವಿಜನಿನ ಎ. ಸಿ. ಯನ್ನು ಅಧ್ಯಕ್ಷರನ್ನಾಗಿ ಮತ್ತು ಜಿಲ್ಲಾ ಸೋಷಿಯಲ್ ವೆಲ್‌ಫೇರ್ ಆಫೀಸರನ್ನು ಸದಸ್ಯರನ್ನಾಗಿ ಮಾಡಿ ಒಂದು ನಿಷ್ಪಕ್ಷಪಾತವಾದ ಕಮಿಟಿ ಮಾಡಿ. ಅವರು ಜನರ ಮನವಿಗಳನ್ನು ಕೇಳುವ ಹಾಗೆ ಮಾಡಬೇಕೆಂದು ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರಿಗೆ, ಹೆಣ್ಣುಮಕ್ಕಳಿಗೆ ಮೀಸಲು ಸ್ಥಾನಗಳನ್ನು ಸರಿಯಾದ ರೀತಿಯಲ್ಲಿ ಸಿಗುವ ಹಾಗೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಒಂದು ಗ್ರಾಮದವರು ಪಂಚಾಯಿತಿ ಅಧ್ಯಕ್ಷರು ಅಥವಾ ಅವರಿಗೆ ಸಂಬಂಧಪಟ್ಟವರು ಕಾರ್ಯದರ್ಶಿಯಾದರೆ ಬೇರೆ ಗ್ರಾಮಕ್ಕೆ ತೊಂದರೆಯಾಗುತ್ತದೆ ಇವೆಲ್ಲವೂ ಸರ್ಕಾರದ ಗಮನಕ್ಕೆ ಬಂದಿದೆ ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜಿ ಬಣಕಾರ್ :—ಕಡಿಮೆ ವರಮಾನವುಳ್ಳ ಗ್ರಾಮಪಂಚಾಯತಿಗಳಿಗೆ ಎಕ್ಸ್ ಅಫಿಷಿಯೋ ಸೆಕ್ರಟರಿಗಳನ್ನು ಮಾಡಿದರೆ ಅವರು ಸರಿಯಾಗಿ ಕೆಲಸ ಮಾಡುವುದಿಲ್ಲ. ಇದರಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ರಾಚಯ್ಯ : ಈ ವಿಚಾರದಲ್ಲಿ ಸರ್ಕಾರ ಪರಿಶೀಲನೆ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತದೆ.

## FACILITIES TO TOURISTS AT HALEBID AND BELUR

322. SRI T. R. SHAMANNA (Fort).—

Will the Minister for Labour and Tourism be pleased to state :—

(*a*) whether the Government has considered Halebid and Belur in Hassan District as very important tourist centres attracting large number of tourists —both inland and foreign ;

(*b*) if so, whether adequate facilities of drinking water supply and lavatory have been provided near Halebid and Belur Temples;

(*c*) whether adequate accommodation facilities for travellers and tourists are provided in Belur and Halebid;

(*d*) if not, the steps taken by Government to provide the above said facilities ?

SRI S.M. YAHYA.—(Minister for Labour and Tourism) (*a*) yes.

(*b*) facilities provided are not adequate. Efforts are being made to provide these facilities.

(*c*) the present accommodation is considered to be adequate.

(*d*) does not arise in view of reply to clause (*c*)

ಶ್ರೀ ಟಿ. ಆರ್. ಶಾಮಣ್ಣ : ಬೇಲೂರು ಮತ್ತು ಹಳೇಬೀಡುಗಳಲ್ಲಿ ಕುಡಿಯುವ ನೀರಿನ ಸೌಕರ್ಯ ಮತ್ತು ಇತರ ಸೌಕರ್ಯಗಳು ಇಲ್ಲ. ಅಲ್ಲಿಗೆ ಮೊನ್ನೆ ಎಸ್ಟಿಮೇಟ್ ಕಮಿಟಿಯವರು ಹೋದಾಗ ಅನೇಕರು ಇದರ ಬಗ್ಗೆ ದೂರು ಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ತಕ್ಕ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಾ?

ಶ್ರೀ ಎಸ್.ಎಂ. ಯಾಹ್ಯಾ : ಉತ್ತರದಲ್ಲಿ ಇನ್‌ಎಡಿಕ್ವೇಟ್ ಸೌಕರ್ಯ ಇದೆ ಎಂದು ಹೇಳಿದ್ದೇವೆ. ಹಳೇಬೀಡಿನಲ್ಲಿ ಕುಡಿಯುವ ನೀರಿನ ಸಾಕಷ್ಟು ಸೌಕರ್ಯ ಇಲ್ಲ. ಈಗತಾನೇ 40 ಸಾವಿರ ರೂಪಾಯಿಯ ಒಂದು ಪ್ರೊಪೋಸಲನ್ನು ಅಲ್ಲಿ ಕುಡಿಯುವ ನೀರು ಒದಗಿಸುವುದಕ್ಕೋಸ್ಕರ ಹಾಕಿದೆ.

ಶ್ರೀ ಟಿ. ಆರ್. ಶಾಮಣ್ಣ :— ಹಳೇಬೀಡು ಮತ್ತು ಬೇಲೂರಿನಲ್ಲಿ ಸರಿ ಯಾದಂತಹ ಗೈಡ್ ಇಲ್ಲದೆ ಅಲ್ಲಿಗೆ ಬರತಕ್ಕಂತಹ ಪ್ರವಾಸಿಗರಿಗೆ ಬಹಳ ಅನಾನುಕೂಲವಾಗಿದೆ ಮತ್ತು ಉಳಕೊಳ್ಳುವುದಕ್ಕೆ ಜಾಗವಿಲ್ಲವೆಂದು ಹೇಳು ತ್ತಿದ್ದಾರೆ. ಆದೇ ರೀತಿ ಊಟ ವಸತಿಗೂ ಸರಿಯಾದ ಅನುಕೂಲ ಇಲ್ಲವೆಂದು ಅನೇಕರು ದೂರು ಕೊಟ್ಟಿದ್ದಾರೆ. ಆದ್ದರಿಂದ ಅಲ್ಲಿಗೆ ಮಂತ್ರಿಯವರು ಭೇಟಿ ಕೊಟ್ಟು ಬೇಕಾದ ಸೌಲಭ್ಯಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಬೇಲೂರು ಮತ್ತು ಹಳೇಬೀಡು ಹಾಸನ ಟೂರಿಸಂ ಕಾಂಪ್ಲೆಕ್ಸ್‌ನಲ್ಲಿ ಬರುತ್ತದೆ. ಮೊದಲನೆಯದಾಗಿ ಅಲ್ಲಿ ಬರುವ ಟೂರಿಸ್ಟ್‌ಗಳು ರಾತ್ರಿ ವೇಳೆ ಅಲ್ಲಿ ಇರುವುದಿಲ್ಲ; ಹೆಚ್ಚಾಗಿ ಹಾಸನಕ್ಕೆ ಹೋಗು ತ್ತಾರೆ ಎರಡನೆಯದಾಗಿ, ಬೇಲೂರಿನಲ್ಲಿ ಒಂದು ಸರ್ಕ್ಯೂಟ್ ಹೌಸ್, ಒಂದು ಇನ್ಸ್‌ಪೆಕ್ಷನ್ ಬಂಗಲೆ ಮತ್ತು ಒಂದು ಡಾರ್ಮಿಟರಿ ಇದೆ. ಅದಲ್ಲದೆ ಅಲ್ಲಿ ಎರಡು ಮೂರು ಪ್ರೈವೇಟ್ ಹೋಟೇಲುಗಳು ಸಹ ಇವೆ.

1-30 P.M.

ಹಳೇಬೀಡುನಲ್ಲಿ ಈಗಾಗಲೇ ಒಂದು ಟೂರಿಸ್ಟ್ ಬಂಗಲೆ ಇದೆ. ಅಲ್ಲಿ ಅಕಾಮಡೇಷನ್ ಸರಿಯಾಗಿದೆಯೆಂದು ತಿಳಿದುಬಂದಿದೆ. ನಾವು ಈಗ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಬೇಲೂರಿನಲ್ಲಿ ಮತ್ತು ಹಳೇಬೀಡಿನಲ್ಲಿ ಎರಡು ಕಡೆ ಗಳಲ್ಲಿಯೂ ಎರಡೆರೆಡು ಲಕ್ಷ ರೂಪಾಯಿಗಳನ್ನು ಅದರ ಅಮೆನಿಟೀಸ್‌ಗೋಸ್ಕರ ಖರ್ಚು ಮಾಡಬೇಕೆಂದು ಇಟ್ಟುಕೊಂಡಿದ್ದೇವೆ ಅದೂ ಅಲ್ಲದೆ ಅಲ್ಲಿಗೆ ಒಂದು ಮಿನಿ ಬಸ್ ಬೇಕೆಂದು ಕೇಳಿರುವುದರಿಂದ ಅದಕ್ಕೂ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಈಗಾಗಲೇ ಪಂಚವಾರ್ಷಿಕ ಯೋಜನೆಯಲ್ಲಿ ಆ ಒಂದು ಪ್ರೊಪೋಜಲ್ ಇದೆ.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ : (ಅ) ಪ್ರಶ್ನೆಯಲ್ಲಿ ಕೊಟ್ಟಿರತಕ್ಕ ಉತ್ತರಕ್ಕೂ (ಇ) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರಕ್ಕೂ ತಾಳೆ ನೋಡಿದಾಗ ಮತ್ತು ಈಗ ತಾವು ಕೊಡತಕ್ಕ ಹೇಳಿಕೆಗೆ ದ್ವಂದ್ವ ಇದೆಯೆಂಬುದಾಗಿ ನಾನು ಒಪ್ಪಿಕೊಳ್ಳ ಬೇಕಾಗಿದೆ. ಬೇಲೂರಿನಲ್ಲಿ ಒಂದು ಸರ್ಕಿಟ್ ಹೌಸ್ ಇದೆ ಎಂದು ಹೇಳಿದಿರಿ. ಆ ಒಂದು ಮಾಹಿತಿ ಸರಿಯಾದ ಇನ್‌ಫರ್‌ಮೇಶನ್ ಅಲ್ಲವೆಂಬುದನ್ನು ಮಾನ್ಯ ಮಂತ್ರಿಗಳು ಮನಗಾಣಬೇಕು. ಜೊತೆಗೆ ಅದರ ಬಗ್ಗೆ ನಾವು ಮನವಿಗಳನ್ನು ಕೊಟ್ಟರೂ ಇದುವರೆಗೆ ಯಾವ ಒಂದು ಕ್ರಮವನ್ನೂ ತೆಗೆದುಕೊಂಡಿಲ್ಲ. ಏಕೆ ? ಮತ್ತು ಹೊರಗಡೆಯಿಂದ ಬರತಕ್ಕ ಟೂರಿಸ್ಟ್‌ಗಳಿಗೆ ಕುಡಿಯುವುದಕ್ಕೆ ಅಲ್ಲಿ ನೀರು ಒದಗದೇ ಹೋದರೆ ಟೂರಿಸ್ಟ್‌ಗಳನ್ನು ಡಿಪಾರ್ಟ್‌ಮೆಂಟ್ ಯಾವರೀತಿ ಆಕರ್ಷಣೆ ಮಾಡುತ್ತದೆ ?

ಶ್ರೀ ಎಸ್. ಎಂ. ಯಾಹ್ಯಾ : ನೀರಿನ ಸೌಲಭ್ಯ, ಮತ್ತು ಅಕಾಮಡೇಷನ್ ಬೇಲೂರಿನಲ್ಲಿ ಇದೆ. ಇನ್ನೂ ಹಳೇಬೀಡಿಗೆ 40 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವೆವು. ಅಕಾಮಡೇಷನ್ ವಿಷಯದಲ್ಲಿ ಅಲ್ಲಿಗೆ ಬರುವವರು ಹಾಸನ ದಲ್ಲಿ ತಂಗುವುದಕ್ಕೆ ಬೇಕಾದಷ್ಟು ಸೌಲಭ್ಯಗಳನ್ನು ಮಾಡಲಾಗಿದೆ.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ : ಸರ್ಕಾರದ ಪಿ. ಎಚ್. ಡಿ. ಯಲ್ಲಿ ಒಂದು ಯೋಜನೆ ಇದರ ಬಗ್ಗೆ ತಯಾರಾಗಿದೆ. ಈ ಯೋಜನೆಗೆ ಖರ್ಚು ಆಗುವುದರಲ್ಲಿ ಶೇಕಡ 10 ರಷ್ಟು ಹಣವನ್ನು ಪಂಚಾಯತಿಯವರು ಕೊಡಬೇಕೆಂದು ಹೇಳಿದಾಗ ಅಲ್ಲಿ ಆರ್ಥಿಕವಾಗಿ ಸಾಕಷ್ಟು ಶಕ್ತಿ ಇಲ್ಲದೇ ಇರುವುದರಿಂದ ಅವರು ಕೊಡಬೇಕಾಗಿರುವ ಹಣವನ್ನು ಸರ್ಕಾರದ ಮೂಲಕ ಕೊಡಿಸಿ ತಕ್ಷಣ ಅದನ್ನು ಜಾರಿಗೆ ಕೊಡುವ ಹಾಗೆ ತಾವು ಆಸಕ್ತಿ ವಹಿಸುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ : ಪಂಚಾಯತಿಯವರು ಆಸಕ್ತಿ ವಹಿಸಿ ಶೇಕಡ 10 ರಷ್ಟು ಹಣವನ್ನು ಕೊಟ್ಟರೆ, ಅಲ್ಲಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಅನುಕೂಲವಾಗುತ್ತದೆ. ಅಲ್ಲಿಗೆ ಬರತಕ್ಕ ಟೂರಿಸ್ಟ್‌ಗಳಿಗೂ ಅನುಕೂಲವಾಗುತ್ತದೆ.

ಶ್ರೀ ಎನ್ ಐಸ್. ಗುರುಸಿದ್ದಪ್ಪ : ಅಲ್ಲಿನ ಟೂರಿಸ್ಟ್ ಬಂಗ್ಲೋಗಳಲ್ಲಿ ವಿಶೇಷವಾಗಿ ಅಫೀಸಿಯಲ್ಸ್‌ಗೆ ರಿಜರ್ವ್ ಆಗಿರುವುದರಿಂದ ಅಲ್ಲಿ ಟೂರಿಸ್ಟ್‌ಗಳಿಗೆ ಜಾಗ ಸಿಕ್ಕುತ್ತಾ ಇಲ್ಲ. ಅಂತಹ ಸಂದರ್ಭದಲ್ಲಿ ತಾವು ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ : ಅದರ ಬಗ್ಗೆ ಈಗಾಗಲೇ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ : ಹಾಸನದಲ್ಲಿ ಟೂರಿಸ್ಟ್‌ಗೆ ಹೆಚ್ಚಿಗೆ ಸೌಲಭ್ಯಗಳನ್ನು ಒದಗಿಸುತ್ತೇವೆಂದು ಹೇಳಿದ್ದೀರಿ. ಇದರಿಂದ ಹೊರಗಡೆಯಿಂದ ಬರುವ ಟೂರಿಸ್ಟ್‌ಗಳಿಗೆ ಯಾವ ವಿಧವಾದ ತೊಂದರೆಯೂ ಆಗುತ್ತಾ ಇಲ್ಲ. ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಹಣದಿಂದ ಟೂರಿಸ್ಟ್ ಬಂಗಲೆಯಲ್ಲಿ ಇತರ ಸೌಲಭ್ಯಗಳನ್ನು ಒದಗಿಸಿದರೆ ಅಲ್ಲಿ ಕೇವಲ ದೊಡ್ಡವರು ಮಾತ್ರ ಉಳಿದುಕೊಳ್ಳಬೇಕು ಜೊತೆಗೆ ಒಂದು ರೂಮಿಗೆ ಒಂದು ದಿನಕ್ಕೆ 25 ರೂಪಾಯಿಗಳಷ್ಟು ಬಾಡಿಗೆ ಕೊಡಬೇಕಾಗಿದೆ. ಇದರಿಂದ ಸಾಮಾನ್ಯ ಜನರಿಗೆ ಬಹಳ ಕಷ್ಟವಾಗುತ್ತದೆ. ಅವರು ಆ ರೀತಿ ಹೆಚ್ಚಿಗೆ ಬಾಡಿಗೆ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಈಗಲಾದರೂ ಟೂರಿಸ್ಟ್ ಡಿಪಾರ್ಟ್‌ಮೆಂಟಿನವರು ಅಲ್ಲಿ ವಸತಿಗೃಹಗಳನ್ನು ನಿರ್ಮಾಣ ಮಾಡುವುದಕ್ಕೆ ಪ್ರಯತ್ನಪಡುವಹಾಗೆ ಸರ್ಕಾರದವರು ಸೂಕ್ತ ವ್ಯವಸ್ಥೆಯನ್ನು ಮಾಡುತ್ತಾರೆಯೇ ?

ಶ್ರೀ ಎಸ್. ಎಂ. ಯ್ಯಾಹ್ಯಾ : ಬೇಲೂರಿನಲ್ಲಿ ಮತ್ತು ಹಳೇಬೀಡಿನಲ್ಲಿ ಒಂದು ಸರ್ಕಾರದ ಟೂರಿಟ್ಟ್ಸ್ ಬಂಗಲೆಯನ್ನು ಕಟ್ಟಬೇಕೆಂಬ ಅಲೋಚನೆ ಈಗಾಗಲೇ ಸರ್ಕಾರಕ್ಕೆ ಇದೆ. ಈ ವಿಚಾರವನ್ನು ಸರ್ಕಾರ ಗಮನದಲ್ಲಿಟ್ಟು ಕೊಂಡು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ತಕ್ಕ ಕ್ರಮವನ್ನು ತೆಗೆದು ಕೊಳ್ಳುತ್ತದೆ.

ಶ್ರೀ ಟಿ. ಆರ್. ಶಾಮಣ್ಣ : ನಾನು ಅನೇಕ ಬಾರಿ ಈ ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದ್ದೇನೆ. ಬೇಲೂರು, ಹಳೇಬೀಡು ಮುಂತಾದ ಸ್ಥಳಗಳಲ್ಲಿ ಸಾಕಷ್ಟು ಗೈಡ್ಸ್ ಇಲ್ಲ. ಅಲ್ಲಿಗೆ ಬರುತ್ತಿರುವ ಜನಗಳಿಂದ ಕೆಲವು ಜನ ವಿಶೇಷವಾಗಿ ಹಣವನ್ನು ಸುಲಿಗೆ ಮಾಡುತ್ತಿದ್ದಾರೆ. ಆದ್ದರಿಂದ ಅಲ್ಲಿಗೆ ಉತ್ತಮ ವಾದಂಥ ಗೈಡುಗಳನ್ನು ಹಾಕುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ : ಗೈಡ್ಸ್ ವಿಷಯ ಮುಂದೆ ಯೋಚನೆ ಮಾಡಲಾಗುವುದು.

## PLYING OF PRIVATE BUSES ON NATIONALISED ROUTES IN BIDAR DISTRICT

382. SRI BAPURAO ANANDA RAO (Basavakalyan).—

Will the Minister for Transport and Housing be pleased to state :—

(*a*) whether the Government is aware of the enormous increase in stage carriages, *i e.*, private bus services, plying on the State National Highways and District roads causing huge losses to the K.S.R.T.C. in Bidar District due to faulty licensing policy of the R. T. As.;

(*b*) whether the Government has any proposal to re-orient its policy of issuing licences to private buses on State National Highways and Di trict roads and completely stop them from plying on these roads in Bidar District ;

(*c*) the steps taken to curb the un-healthy competition between K.S.R.T.C. and private buses ?